ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-155 Volume-155	ªÉÄÃgÀÄ, ಗುರುವಾರ, 14, ಮೇ, 2020 (ವೈಶಾಖ, 24 ಶಕವರ್ಷ ೧೯೪2) MYSURU, THURSDAY, 14, MAY, 2020(Vaishakha 24, ShakaVarsha 1942)	ಸಂಚಿಕೆ-20 Issue - 20

¨ÁUÀ6 ಎ

ªÉÄÃgÀ«¨ÁUÉªÀvÀªÉÄÃgÀ ªÀiÁqÀ¯Á¸ÀªÀaPÀÀgÀ zÀÆtPÀqÀ PÉqÀÄ ZÁªÀgÁd£ÀgÀGqÀ f¯ÉÃUÉ£ÀªÀÁUÀªÀCçüÀZÀÉÃªÀvÀÄDzÉÃÀÄ

ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ಕಛೇರಿ ನಡವಳಿಗಳು

ವಿಷಯ: ರಾಷ್ಟ್ರೀಯ ಹೆದ್ದಾರಿ-73 (ಹಳೆ ರಾಹೆ ನಂ.234)ರ ಮಂಗಳೂರು-ವಿಲ್ಲುಪುರಂ ರಸ್ತೆಯ ಕಿ.ಮೀ.86.200 ರಿಂದ 99.200 (ಕೊಟ್ಟಿಗೆಹಾರ) ರವರೆಗಿನ ಚಾರ್ಮಾಡಿಘಾಟ್ ರಸ್ತೆಯ ಮಾರ್ಗದಲ್ಲಿ ಲಘು ವಾಹನಗಳ ಸಂಚಾರದೊಂದಿಗೆ ಕೆ.ಎಸ್.ಆರ್.ಟಿ.ಸಿ ಸಂಸ್ಥೆಯ ಮಿನಿ ಬಸ್ಸುಗಳ ಸಂಚಾರಕ್ಕೆ ಅನುಮತಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಸಮಸಂಖ್ಯೆ ಆದೇಶದ ದಿನಾಂಕ:07.08.2019, 09.08.2019, 14.08.2019, 14.09.2019, 14.10.2019 ಮತ್ತು 27-11-2019

2) ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ಬೇಲೂರು ಇವರ ಜಂಟಿ ವರದಿ ಸಂಖ್ಯೆ:ಕರಾಸಾ/ಚಿವಿ/ಸಂ/ಕಾರ್ಯ/3832/2019-20 ದಿನಾಂಕ:20-11-2019

3) ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನ ರವರ ಪತ್ರ ಸಂಖ್ಯೆ:ಕಾಇಂ:ರಾಹೆವಿ:ಹಾ:ಎಇ-3/ಚಾರ್ಮಾಡಿ ಘಾಟ್ ರಸ್ತೆ 2019-20/1062 ದಿನಾಂಕ:30-11-2019

****

ಪ್ರಸ್ತಾವನೆ:

ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನರವರು ಸಲ್ಲಿಸಿದ್ದ ವರದಿಯನ್ನು ಆಧರಿಸಿ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-73 (ಹಳೆ ರಾಹೆ ನಂ.234)ರ ಮಂಗಳೂರು-ವಿಲ್ಲುಪುರಂ ರಸ್ತೆಯ ಕಿ.ಮೀ.86.200 ರಿಂದ 99.200 (ಕೊಟ್ಟಿಗೆಹಾರ) ರವರೆಗಿನ ಚಾರ್ಮಾಡಿಘಾಟ್ ರಸ್ತೆಯ ಮಾರ್ಗದಲ್ಲಿ ದಿನಾಂಕ: 28-11-2019 ರಿಂದ ಮುಂದಿನ ಆದೇಶದವರೆಗೆ ದಿನದ 24 ಗಂಟೆ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅನುಮತಿ ನೀಡಿ, ಎಲ್ಲಾ ರೀತಿಯ ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಈ ಕಛೇರಿಯಿಂದ ಉಲ್ಲೇಖ(1)ರಂತೆ ಆದೇಶ ಹೊರಡಿಸಲಾಗಿರುತ್ತದೆ.

ಆದರೆ ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ, ಸಾರಿಗೆ ನಿಗಮ, ಚಿಕ್ಕಮಗಳೂರು ವಿಭಾಗ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ಬೇಲೂರುರವರು ಜಂಟಿಯಾಗಿ ಸ್ಥಳ ಪರಿಶೀಲನೆ

ನಡೆಸಿ ಉಲ್ಲೇಖ(2)ರಂತೆ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ದಿನಾಂಕ:19-11-2019 ರಂದು ಶಿವಮೊಗ್ಗ ವಿಭಾಗದ ಮಿನಿ ವಾಹನವನ್ನು ಚಿಕ್ಕಮಗಳೂರಿಗೆ ತರಿಸಿಕೊಂಡು ಸ್ಥಳೀಯ ಅಧಿಕಾರಿಗಳೊಂದಿಗೆ ಕೊಟ್ಟಿಗೆಹಾರ-ಚಾರ್ಮಾಡಿ ಮಾರ್ಗದ ಸಮೀಕ್ಷೆಯನ್ನು ನಡೆಸಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ ಎಂದು ತಿಳಿಸಿರುತ್ತಾರೆ.

1. ಸಂಸ್ಥೆಯ ಮಿನಿ ವಾಹನದ Width 08 ಅಡಿ (2.43 Mtrs) ಇದ್ದು, ಮಿರರ್ width ಸೇರಿ 09 ಅಡಿಗಳಾಗುತ್ತದೆ. (2.7 Mtrs) ಬಸ್ಸಿನ ಉದ್ದ 30 ಅಡಿ (9.14 Mtrs) ಇರುತ್ತದೆ. Front Wheel outer length 7 ಅಡಿ (2.13 Mtrs) ಇರುತ್ತದೆ. Ground clearance front 15`` Rear 16`` ಇರುತ್ತದೆ.
2. ರಾಷ್ಟ್ರೀಯ ಹೆದ್ದಾರಿ-73ರ ಚಿಕ್ಕಮಗಳೂರು ಗಡಿಯಿಂದ ಕೊಟ್ಟಿಗೆಹಾರ ವರೆಗಿನ (ಕಿ.ಮೀ 86.200 ರಿಂದ ಕಿ.ಮೀ 99.200) ಚಾರ್ಮಡಿ ಘಾಟ್ ರಸ್ತೆಯು 7.00 ರಿಂದ 9.00 ಮೀಟರ್ ಗಳಷ್ಟು ಅಗಲವಿರುತ್ತದೆ. ಹಾಗೂ ಸರಾಸರಿ 5.5 ಮೀಟರ್ ಗಳಷ್ಟು ಡಾಂಬರ್ ರಸ್ತೆ ಇರುತ್ತದೆ.
3. ಸದರಿ ರಸ್ತೆಯಲ್ಲಿ ದಿನಾಂಕ:10-08-2019ರಂದು ಸುರಿದ ಭಾರಿ ಮಳೆಗೆ ಕಿ.ಮೀ 93.050, ಕಿ.ಮೀ.93.100, ಕಿ.ಮೀ.93.150, ಕಿ.ಮೀ.94.050, ಕಿ.ಮೀ.94.550, ಕಿ.ಮೀ.95.700 ಹಾಗೂ 88.200 ಗಳಲ್ಲಿ ರಸ್ತೆಯ ಭಾಗವು ಕುಸಿದಿದ್ದು ರಸ್ತೆಯು ಹಾಳಾಗಿರುತ್ತದೆ.
4. ಮೇಲೆ ಹೇಳಲಾದ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಸುರಕ್ಷತಾ ತಡೆ ಗೋಡೆಗಳನ್ನು ನಿರ್ಮಿಸಲಾಗಿದೆ ಹಾಗೂ ತಾತ್ಕಾಲಿಕ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುಡ್ಡದ ಭಾಗದಲ್ಲಿ ಸಾಧ್ಯವಾದಷ್ಟು ಅಂದರೆ 2 ರಿಂದ 3 ಮೀಟರ್ ಗಳಷ್ಟು ರಸ್ತೆಯನ್ನು ಅಗಲೀಕರಿಸಲಾಗಿದೆ. ಆದ್ದರಿಂದ ಮೇಲೆ ಹೇಳಲಾದ ಗುಡ್ಡ ಕುಸಿದಿರುವ ಜಾಗಗಳಲ್ಲಿ ರಸ್ತೆಯು 4 ರಿಂದ 6 ಮೀಟರ್ ಗಳಷ್ಟು ಅಗಲವಿರುತ್ತದೆ.
5. ಮುಂದುವರೆದು, ಮೇಲೆ ಹೇಳಲಾದ ಕಂದಕಗಳಿರುವ ಸ್ಥಳಗಳಲ್ಲಿ ಏಕಮುಖ ಸಂಚಾರದೊಂದಿಗೆ, 20 ಕಿ.ಮೀ/h ವೇಗಮಿತಿಯೊಂದಿಗೆ ಅತೀಜಾಗರೂಕತೆಯಿಂದ ವಾಹನವನ್ನು ಚಲಾಯಿಸಬೇಕಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ಬೇಲೂರು ಇವರು ವರದಿಸಿರುತ್ತಾರೆ.
6. ಆದ್ದರಿಂದ ನಿಗಮದ ಮಿನಿ ಬಸ್ಸು ಮಿರರ್ ಸೇರಿ 9 ಅಡಿ (2.74 Mtr) ಅಗಲವಿದ್ದು ವೇಗ ನಿಯಂತ್ರಣವನ್ನು ಒಳಗೊಂಡಿರುವುದರಿಂದ ಸದರಿ ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಮಿನಿ ಬಸ್ಸನ್ನು ಸಂಚರಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕೊಟ್ಟಿಗೆಹಾರದಿಂದ ಉಜಿರೆ ಕ್ರಾಸ್ ವರೆಗೆ ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆ ವರೆಗೆ ಸೀಮಿತಗೊಳಿಸಿ ಮಿನಿ ಬಸ್ಸುಗಳನ್ನು ಸಂಚರಿಸಲು ಅನುವು ಮಾಡಿಕೊಟ್ಟು ಪ್ರಯಾಣಿಕರು, ವಿದ್ಯಾರ್ಥಿಗಳು, ರೋಗಿಗಳು ಮತ್ತು ವೃದ್ದರಿಗೆ ಅನುಕೂಲ ಮಾಡಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಕಾರ್ಯಪಾಲಕ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನರವರು ಉಲ್ಲೇಖ(3)ರಂತೆ ವರದಿ ಸಲ್ಲಿಸಿ ಮೇಲ್ಕಂಡ ಅಂಶಗಳನ್ನು ಪ್ರಸ್ತಾಪಿಸಿ ಉಲ್ಲೇಖ(1)ರಂತೆ ಈ ಕಛೇರಿಯಿಂದ ಹೊರಡಿಸಿರುವ ಆದೇಶವನ್ನು ಪರಿಷ್ಕರಿಸಿ ಚಾರ್ಮಾಡಿಘಾಟ್ ಭಾಗದಲ್ಲಿ ದಿನದ 24 ಗಂಟೆಗಳು ಭಾರಿ ವಾಹನಗಳ ಸಂಚಾರ ನಿರ್ಬಂಧವನ್ನು ಮುಂದುವರೆಸುತ್ತಾ, ಈಗಾಗಲೇ ಸಂಚಾರಕ್ಕೆ ಅನುಮತಿ ನೀಡಲಾದ ಲಘು ವಾಹನಗಳೊಂದಿಗೆ ಕೆ.ಎಸ್.ಆರ್.ಟಿ.ಸಿ ಮಿನಿ ಬಸ್ಸಿನ ಸಂಚಾರಕ್ಕೆ ಮಾತ್ರ ಅನುಮತಿಯನ್ನು ನೀಡಿ ಪ್ರಯಾಣಿಕರು, ವಿದ್ಯಾರ್ಥಿಗಳು, ರೋಗಿಗಳು ಹಾಗೂ ವೃದ್ದರಿಗೆ ಅನುಕೂಲ ಮಾಡಿಕೊಡುವಂತೆ ಕೋರಿರುತ್ತಾರೆ.

ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ಬೇಲೂರು ಮತ್ತು ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನರವರು ಸಲ್ಲಿಸಿರುವ ವರದಿಗಳನ್ನು ಅವಲೋಕಿಸಿದೆ. ಚಾರ್ಮಾಡಿಘಾಟ್ ಪ್ರದೇಶದಲ್ಲಿ ಭಾರಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದನ್ನು ಗಮನಿಸಲಾಗಿದೆ. ಸದರಿ ರಸ್ತೆಯು ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರಮುಖವಾದ ಸಂಪರ್ಕ ಸೇತುವೆಯಾಗಿರುತ್ತದೆ. ಚಿಕ್ಕಮಗಳೂರಿನಿಂದ ಮಂಗಳೂರಿಗೆ ವಿದ್ಯಾಭ್ಯಾಸಕ್ಕಾಗಿ ಹಲವು ವಿದ್ಯಾರ್ಥಿಗಳು ಸಂಚರಿಸುತ್ತಿರುವುದಲ್ಲದೆ, ಚಿಕಿತ್ಸೆಗಾಗಿ ರೋಗಿಗಳು ಸಹ ವಾಹನಗಳಲ್ಲಿ ತೆರಳಬೇಕಾಗಿರುತ್ತದೆ. ಎಕ್ಸಿಕ್ಯೂಟಿವ್ ಇಂಜಿನಿಯರ್

ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನರವರು ನೀಡಿರುವ ವರದಿಯಂತೆ ಲಘು ವಾಹನಗಳ ಸಂಚಾರ ವ್ಯವಸ್ಥೆಯೊಂದಿಗೆ ಕೆ.ಎಸ್.ಆರ್.ಟಿ.ಸಿ ಮಿನಿ ಬಸ್ಸಿನ ಸಂಚಾರಕ್ಕೆ ಅನುವು ಮಾಡಿಕೊಡುವುದು ಸೂಕ್ತವಾಗಿರುವುದು ಗಮನಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಮನಗಂಡು ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ರೋಗಿಗಳ ಹಿತದೃಷ್ಟಿಯಿಂದ ಪ್ರಸ್ತಾಪಿತ ಮಾರ್ಗದಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಪ್ರತಿ ದಿನ ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಕಾಲಮಿತಿಯನ್ನು ನಿಗದಿಪಡಿಸಿ ಕೆ.ಎಸ್.ಆರ್.ಟಿ.ಸಿ ಸಂಸ್ಥೆಯ ಮಿನಿ ಬಸ್ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಈ ಕೆಳಗಿನಂತೆ ಆದೇಶಿಸಿದೆ.

ಆದೇಶದ ಸಂಖ್ಯೆ:ಜೆ1 ಎಂಎಜಿ.ಸಿಆರ್:109/2019-20 ದಿನಾಂಕ: 26/12/2019

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಡಾ.ಬಗಾದಿ ಗೌತಮ್ ಭಾ.ಆ.ಸೇ., ಜಿಲ್ಲಾದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಆದ ನಾನು ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 115 ಹಾಗೂ ಕರ್ನಾಟಾರು ಮೋಟಾರು ವಾಹನಗಳ ನಿಯಮಾವಳಿಗಳು 1989ರ ನಿಯಮ 221(ಎ) (5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಷ್ಟ್ರೀಯ ಹೆದ್ದಾರಿ-73 (ಹಳೆ ರಾಹೆ ನಂ.234)ರ ಮಂಗಳೂರು-ವಿಲ್ಲುಪುರಂ ರಸ್ತೆಯ ಕಿ.ಮೀ.86.200 ರಿಂದ 99.200 (ಕೊಟ್ಟಿಗೆಹಾರ) ರವರೆಗಿನ ಚಾರ್ಮಾಡಿಘಾಟ್ ರಸ್ತೆಯ ಮಾರ್ಗದಲ್ಲಿ **ದಿನಾಂಕ: 25-12-2019 ರಿಂದ ಮುಂದಿನ ಆದೇಶದವರೆಗೆ ಈ ಕೆಳಕಂಡ ನಿಭಂಧನೆಗಳಿಗೆ ಒಳಪಟ್ಟು ಪ್ರತಿದಿನ ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆಯ ವರೆಗೆ ಕಾಲಮಿತಿಯನ್ನು ನಿಗದಿಪಡಿಸಿ ಕೆ.ಎಸ್.ಆರ್.ಟಿ.ಸಿ ಸಂಸ್ಥೆಯ ಮಿನಿ ಬಸ್ಸುಗಳ ಸಂಚಾರಕ್ಕೆ ಅನುಮತಿ ನೀಡಿ ಆದೇಶಿಸಿದೆ ಹಾಗೂ ಎಲ್ಲಾ ರೀತಿಯ ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿದೆ. ಉಳಿದಂತೆ ದಿನಾಂಕ:27-11-2019ರಂದು ಉಲ್ಲೇಖ(1)ರಂತೆ ಈ ಕಛೇರಿಯಿಂದ ಹೊರಡಿಸಿರುವ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಈ ಆದೇಶವು ಮುಂದಿನ ಆದೇಶದ ವರೆಗೆ ಜಾರಿಯಲ್ಲಿರುತ್ತದೆ.**

ನಿಬಂಧನೆಗಳು:-

1) ಈ ಆದೇಶದಂತೆ ಪ್ರಸ್ತಾಪಿತ ಮಾರ್ಗದಲ್ಲಿ ಅಗತ್ಯವಿರುವ ಸ್ಥಳಗಳಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗ,ಹಾಸನರವರು ಸೂಚನಾ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
2) ಪ್ರಸ್ತಾಪಿತ ಮಾರ್ಗದಲ್ಲಿ ಯಾವುದೇ ರೀತಿಯ ಅಪಘಾತಗಳು ಸಂಭವಿಸದಂತೆ ರಾಷ್ಟ್ರೀಯ ಹೆದ್ದಾರಿ ವಿಭಾಗ ಹಾಸನರವರು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.
3) ಚಾರ್ಮಾಡಿಘಾಟ್ ಭಾಗದಲ್ಲಿ ಅವಕಾಶ ಕಲ್ಪಿಸಿರುವ ಲಘು ವಾಹನಗಳು ಮತ್ತು ಕೆ.ಎಸ್.ಆರ್.ಟಿ ಮಿನಿ ಬಸ್ಸುಗಳು ವೇಗದ ಮೀತಿಯನ್ನು ಪ್ರತಿ ಘಂಟೆಗೆ 20 ಕಿ.ಮೀ ಗೆ ಮೀರದಂತೆ ಸಂಚರಿಸುವುದು.
4) ಚಾರ್ಮಾಡಿಘಾಟ್ ಭಾಗದಲ್ಲಿ ಬಹಳಷ್ಟುಕಡೆ ಭೂಕುಸಿತದಿಂದ ರಸ್ತೆಗೆ ತೀವ್ರರತವಾದ ದಕ್ಕೆ ಉಂಟಾಗಿರುವುದರಿಂದ ಅತ್ಯಂತ ಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡುವುದು.
5) ಚಾರ್ಮಾಡಿ ಘಾಟ್ ಭಾಗದಲ್ಲಿ ಫೋಟೋಗ್ರಫಿ ಮತ್ತು ಸೆಲ್ಫಿ ತೆಗಿಯುವುದನ್ನು ನಿಷೇಧಿಸಿದೆ.

ವಾಹನಗಳ ವರ್ಗೀಕರಣ

ಸಂಚರಿಸಬಹುದಾದ ಲಘು ವಾಹನಗಳು (ಗುಂಪು-ಎ)	ಕಾರುಗಳು, ಜೀಪು, ಟೆಂಪೋ, ವ್ಯಾನ್, ಎಲ್ ಸಿ ವಿ (ಮಿನಿ ವ್ಯಾನ್) ಹಾಗೂ ದ್ವಿಚಕ್ರ ವಾಹನಗಳು, ಅಂಬುಲೆನ್ಸ್ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಯ ಮಿನಿ ಬಸ್ಸುಗಳು
ನಿರ್ಬಂಧಿಸಲಾದ ಭಾರಿ ವಾಹನಗಳು (ಗುಂಪು-ಬಿ)	ಬುಲೆಟ್ ಟ್ಯಾಂಕರ್ಸ್, ಷಿಪ್ ಕಾರ್ಗೋ ಕಂಟೈನರ್ಸ್ ಹಾಗೂ ಲಾಂಗ್ ಚಾಸೀಸ್ ವಾಹನಗಳು, ಹೆವಿ ಕಮರ್ಷಿಯಲ್ ವೆಹಿಕಲ್ಸ್, ಮಲ್ಟಿ ಏಕ್ಸೆಲ್ ಟ್ರಕ್, ಟ್ರಕ್ ಟೈಲರ್, ಸಾರ್ವಜನಿಕರು ಸಂಚರಿಸುವ ಬಸ್ಸುಗಳು, ರಾಜಹಂಸ ಮತ್ತು ಎಲ್ಲಾ ಬಗೆಯ ಅಧಿಕ ಭಾರದ ಸರಕು ಸಾಗಾಣೆ ವಾಹನಗಳು

ಪ್ರಸ್ತಾಪಿತ ಮಾರ್ಗದಲ್ಲಿ ವಾಹನಗಳ ಸಂಚಾರವನ್ನು ನಿಷೇಧಿಸಿರುವ ಬಗ್ಗೆ ಅವಶ್ಯವಿರುವ ಸೂಚನಾ ಫಲಕಗಳನ್ನು ಅಳವಡಿಸಲು ಹಾಗೂ ಸಂಚಾರ ನಿಯಂತ್ರಣ ಸಿಬ್ಬಂದಿಗಳನ್ನು ನೇಮಕಗೊಳಿಸಲು ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಇವರು ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 116 ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳು 1989ರ ನಿಯಮ 221(ಎ)(2)ರ ಪ್ರಕಾರ ಅಧಿಕಾರವುಳ್ಳವರಾಗಿರುತ್ತಾರೆ

(ಡಾ.ಬಗಾದಿ ಗೌತಮ್) ಭಾ.ಆ.ಸೇ.,
ಜಿಲ್ಲಾ ದಂಡಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,

PR-53

ಕಂದಾಯ ಇಲಾಖೆ

ಅಧ್ಯಕ್ಷರು, ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ಸಂಖ್ಯೆ: ಗ್ರಾ.ಲೆ.ಸಿಬ್ಬಂದಿ 180/2019-2020 **ದಿನಾಂಕ: 01-04-2020**

:: ಪರಿಷ್ಕೃತ ಅಧಿಸೂಚನೆ ::

ವಿಷಯ:-	ಗ್ರಾಮಲೆಕ್ಕಿಗರ ನೇರನೇಮಕಾತಿ-2020 ಅರ್ಜಿ ಸಲ್ಲಿಸುವ ಹಾಗೂ ಚಲನ್ ಪಾವತಿಸುವ ಅವಧಿಯನ್ನು ವಿಸ್ತರಿಸುವ ಕುರಿತು.
ಉಲ್ಲೇಖ:	ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ: 27-02-2020.

****

ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿ 34 ಗ್ರಾಮಲೆಕ್ಕಿಗರ ಖಾಲಿ ಹುದ್ದೆಗಳನ್ನು ನೇರನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಉಲ್ಲೇಖದ ರೀತ್ಯಾ ಆಹ್ವಾನಿಸಲಾಗಿದೆ. ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿ ಸಲ್ಲಿಸಲು ದಿನಾಂಕ: 31-03-2020 ಕೊನೆಯ ದಿನಾಂಕವಾಗಿದ್ದು, ಶುಲ್ಕ ಪಾವತಿಸಿ ಚಲನ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 01-04-2020 ಆಗಿರುತ್ತದೆ.

ಸದರಿ ಅಧಿಸೂಚನೆಯನ್ವಯ ನಿಗಧಿಪಡಿಸಲಾಗಿರುವ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 30-04-2020 ರವರೆಗೂ ಹಾಗೂ ಶುಲ್ಕ ಪಾವತಿಸಿ ಚಲನ್ ಅಪ್ ಲೋಡ್ ಮಾಡುವ ಅವಧಿಯನ್ನು ದಿನಾಂಕ: 06-05-2020 ರವರೆಗೂ ವಿಸ್ತರಿಸಲಾಗಿದೆ. ಉಳಿದಂತೆ ಉಲ್ಲೇಖದ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

(ಆರ್.ಗಿರೀಶ್, ಭಾ.ಆ.ಸೇ)
ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ,
ಮತ್ತು ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ

PR-54

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕಂದಾಯ ಇಲಾಖೆ

ಅಧ್ಯಕ್ಷರು, ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ಸಂಖ್ಯೆ: ಗ್ರಾ.ಲೆ.ಸಿಬ್ಬಂದಿ 180/2019-2020 **ದಿನಾಂಕ: 30-04-2020**

:: ಪರಿಷ್ಕೃತ ಅಧಿಸೂಚನೆ ::

ವಿಷಯ:- ಗ್ರಾಮಲೆಕ್ಕಿಗರ ನೇರನೇಮಕಾತಿ-2020 ಅರ್ಜಿ ಸಲ್ಲಿಸುವ ಹಾಗೂ ಚಲನ್ ಪಾವತಿಸುವ ಅವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ: 27-02-2020 ಮತ್ತು 01-04-2020.

****

ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿ 34 ಗ್ರಾಮಲೆಕ್ಕಿಗರ ಖಾಲಿ ಹುದ್ದೆಗಳನ್ನು ನೇರನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಉಲ್ಲೇಖದ ರೀತ್ಯಾ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 30-04-2020 ಹಾಗೂ ಚಲನ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕವನ್ನು 06-05-2020 ರವರೆಗೂ ವಿಸ್ತರಿಸಲಾಗಿರುತ್ತದೆ.

ಕೊವಿದ್-19 ವೈರಸ್ ಸಂಬಂಧ ಲಾಕ್ ಡೌನ್ ಇರುವುದರಿಂದ ಸದರಿ ಅಧಿಸೂಚನೆಯನ್ವಯ ನಿಗಧಿಪಡಿಸಲಾಗಿರುವ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 07-05-2020 ರವರೆಗೂ ಹಾಗೂ ಶುಲ್ಕ ಪಾವತಿಸಿ ಚಲನ್ ಅಪ್ ಲೋಡ್ ಮಾಡುವ ಅವಧಿಯನ್ನು ದಿನಾಂಕ: 12-05-2020 ರವರೆಗೂ ವಿಸ್ತರಿಸಲಾಗಿದೆ.

(ಆರ್.ಗಿರೀಶ್, ಭಾ.ಆ.ಸೇ)
ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ,
ಮತ್ತು ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ

PR-55

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು ಇವರಿಂದ ಮುದ್ರಿಸಲ್ಪಟ್ಟಿತ್ತು.

VIJAY N M